# ಜ್ಞಾನೋದಯವೆಂದರೆ

ಬುದ್ಧನೆಂಬ ಬೆಳದಿಂಗಳ ಬಗ್ಗೆ ಎಷ್ಟು ಮಾತನಾಡಿದರೂ ಅದೊಂದು ವರ್ಣಿಸಲಾರದ ಕಡಲು. ಬುದ್ಧನ ಬದುಕು ಒಂದು ಪ್ರಯೋಗಶಾಲೆ. ವೈಜ್ಞಾನಿಕ ಸತ್ಯಗಳು ಸಿದ್ಧಾಂತಗಳ ಮೇಲೆ ನಿಂತಿರುವುದಿಲ್ಲ. ಸತ್ಯದ ಸುತ್ತ ನಡೆಸುವ ಪ್ರಾಯೋಗಿಕ ಸಂಶೋಧನೆಗಳು, ಅದರಿಂದ ತಲುಪುವ ಅಂತಿಮ ತೀರ್ಮಾನಗಳನ್ನು ವೈಜ್ಞಾನಿಕತೆ ಅವಲಂಬಿಸಿರುತ್ತದೆ. ಬುದ್ಧ ಬದುಕಿನ ಸತ್ಯಗಳನ್ನು ಹುಡುಕ ಹೊರಡುವ ಕಾರಣ ಅವನು ತನ್ನ ಜೀವನದಲ್ಲಿ ಕಂಡ ಸಾವು, ಮುಪ್ಪು, ಮಾನವನನ್ನು ಕಾಡುವ ರೋಗರುಜಿನಗಳೇ ಕಾರಣವೆಂದು ಇದುವರೆಗೂ ಹೇಳಿಕೊಂಡು ಬರಲಾಗುತ್ತಿದೆ. ನಾವೂ ಅದನ್ನೇ ನಂಬುತ್ತಾ ಬಂದಿದ್ದೇವೆ.

ಬುದ್ಧನನ್ನು ಕುರಿತು ಅಂಬೇಡ್ಕರ್ ಅವರ ಹೊಸ ಆಲೋಚನೆಗಳು ನಮ್ಮ ಇದುವರೆಗಿನ ಓದನ್ನು, ನಂಬಿಕೆಯನ್ನು ಪ್ರಶ್ನಿಸುತ್ತವೆ. ಅವರು ಹಿಂದು ಧರ್ಮದ ಬಗ್ಗೆ ತಮಗೆ ನಂಬಿಕೆಯಿಲ್ಲ ಎಂದು ಬೌದ್ಧಧರ್ಮಕ್ಕೆ ಮತಾಂತರಗೊಂಡರು. ನಂತರ 'ದಿ ಬುದ್ಧ ಅಂಡ್ ಇಸ್ ಧಮ್ಮ' ಎಂಬ ಕೃತಿಯನ್ನು ಪ್ರಕಟಪಡಿಸಿದರು. ಇದು ಬುದ್ಧನನ್ನು ಕುರಿತಾದ ಸಂಶೋಧನಾತ್ಮಕವಾದ ಆಕರ ಗ್ರಂಥವಾಗಿದೆ.

ಇದುವರೆಗೂ ಗುರ್ತಿಸಿರುವಂತೆ ಬುದ್ಧನ ತಂದೆ ಶುದ್ಧೋದನ ಅರಸನಾಗಿರಲಿಲ್ಲ. ಕಪಿಲವಸ್ತುವಿನಲ್ಲಿ ಶಕ್ಯರು ಆಡಳಿತ ನಡೆಸುತ್ತಿದ್ದು ಈ ಶಕ್ಯರಲ್ಲಿ ಹಲವು ಮನೆತನಗಳಿದ್ದು ಇವರು ಸರದಿಯ ಮೇಲೆ ಆಳ್ವಿಕೆ ನಡೆಸುತ್ತಿದ್ದರು. ಬುದ್ಧನ ಜನನ ಕಾಲದಲ್ಲಿ ಶುದ್ಧೋದನ ಆಳ್ವಿಕೆ ನಡೆಸುತ್ತಿದ್ದ. ಆತ ಅತ್ಯಂತ ವೈಭವದಿಂದ ರಾಜ್ಯಭಾರ ಮಾಡುತ್ತಿದ್ದನು. ಇಂತಹ ಕುಟುಂಬದಲ್ಲಿ ಹುಟ್ಟಿದ ಸಿದ್ಧಾರ್ಥನ ಬಗ್ಗೆ ಜ್ಯೋತಿಷಿಗಳು 'ಎಲ್ಲರಂತೆ ಸಾಮಾನ್ಯನಾಗಿ ಜೀವನ ನಡೆಸಿದರೆ ಪ್ರಭುವಾಗುತ್ತಾನೆ, ಸಾಂಸಾರಿಕ ಬಂಧನ ತೊರೆದು ಹೊರಬಂದರೆ ಪ್ರಾಪಂಚಿಕ ಜೀವನದ ಭ್ರಾಂತಿ, ಮಿಥ್ಯೆಗಳನ್ನು ದೂರಗೊಳಿಸುವ ಬುದ್ಧನಾಗುತ್ತಾನೆ' ಎಂಬ ಭವಿಷ್ಯವನ್ನು ನುಡಿದಿರುತ್ತಾರೆ. ಬಾಲ್ಯ ಕಳೆದು ಹರೆಯಕ್ಕೆ ಬಂದ ಬುದ್ಧನಿಗೆ ಯಶೋಧರೆಯೊಂದಿಗೆ ಮದುವೆಯಾಗಿ ರಾಹುಲನೆಂಬ ಮಗನೂ ಜನಿಸುತ್ತಾನೆ. ಇಪ್ಪತ್ತೊಂಬತ್ತರ ಹರೆಯದ ಇವನ ಸುತ್ತಲೂ ವೈರಾಗ್ಯದ ಕಡೆ ತಲೆಹಾಕದಂತೆ ಜವ್ವನೆಯರ ಯೌವನ ತುಂಬಿ ತುಳುಕುತ್ತದೆ.

ಒಂದು ಘಟನೆ ಕಪಿಲವಸ್ತುವಿನಲ್ಲಿ ನಡೆಯುತ್ತದೆ. ಶಕ್ಯರ ರಾಜ್ಯ ಮತ್ತು ಕೊಲಿಯ ರಾಜ್ಯದ ಮಧ್ಯೆ ರೋಹಿಣಿ ನದಿ ಹರಿಯುತ್ತದೆ. ರಾಜರುಗಳ ನಡುವೆ ನೀರ ಬಳಕೆಯನ್ನು ಕುರಿತು ವಿವಾದ ನಡೆದು, ವಿವಾದ ಯುದ್ಧವಾಗಬೇಕೆಂಬ ತೀರ್ಮಾನದಲ್ಲಿ ಕೊನೆಗೊಳ್ಳುತ್ತದೆ. ಬುದ್ಧ 'ಇಂದು ಗೆದ್ದವನನ್ನು ಸೋತವನು ನಾಳೆ ಗೆಲ್ಲ ಹೊರಡುತ್ತಾನೆ' ಎಂದು ಯುದ್ಧವನ್ನು ವಿರೋಧಿಸುತ್ತಾನೆ. ರಾಜ್ಯದಿಂದ ಗಡೀಪಾರು ಆಗುವುದರ ಜೊತೆ ಸಂಸಾರವನ್ನು ತ್ಯಜಿಸಿ ಸನ್ಯಾಸಿಯಾಗುವ ಆಯ್ಕೆಯನ್ನು ಮಾಡಿಕೊಳ್ಳುತ್ತಾನೆ. ತನ್ನಿಂದ ತನ್ನ ಕುಟುಂಬಕ್ಕಾಗುವ ಕೇಡನ್ನು ತಪ್ಪಿಸಿ ಕಾಡಿಗೆ ನಡೆಯುತ್ತಾನೆ.

ಬಾಲ್ಯದಿಂದಲೂ ಐಹಿಕ ಸುಖಗಳಿಗೆ ವಿಮುಖನಾಗಿದ್ದ ಬುದ್ಧ ಹೀಗೆ ತನ್ನ ರಾಜ್ಯ, ಕುಟುಂಬವನ್ನು ತ್ಯಜಿಸಿ ಹೋಗುವಾಗ ಅಂತಹ ತಲ್ಲಣಗಳೇನನ್ನೂ ಎದುರಿಸಿದ ಹಾಗೆ ಕಾಣುವುದಿಲ್ಲ. ತಂದೆ ಹಾಗೂ ಸಾಕುತಾಯಿ ಪ್ರಜಾಪತಿ ಗೌತಮಿಗೆ 'ನಾನು ರಾಜ್ಯ ಬಿಟ್ಟು ಹೋಗದಿದ್ದರೆ ಮುಂದೆ ನಡೆಯುವ ಯುದ್ಧದಲ್ಲಂತೂ ಭಾಗವಹಿಸಲೇಬೇಕಿತ್ತು. ಯುದ್ಧದಲ್ಲಿ ಸಾವು ಬಂದಿದ್ದರೆ ನೀವು ಆ ಸಾವನ್ನು ಒಪ್ಪಿಕೊಳ್ಳುತ್ತಿರಲಿಲ್ಲವೇ. ನನ್ನನ್ನು ಕಳುಹಿಸಿಕೊಡಿ' ಎಂದು ಬೀಳ್ಕೊಳ್ಳುತ್ತಾನೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಯಶೋಧರೆಯ ಪತಿಯನ್ನು ಕುರಿತಾದ ಪ್ರತಿಕ್ರಿಯೆ. ಸ್ವತಃ ಬುದ್ಧನೇ ತನ್ನ ಪತ್ನಿ ಈ ಸುದ್ದಿಯಿಂದ ಎದೆಯೊಡೆದು ನೆಲಕ್ಕುರುಳವಳೆಂದೇ ಭಾವಿಸಿದ್ದ. ಆದರೆ ಯಶೋಧರೆ ತನ್ನ ಭಾವೋದ್ರೇಕಗಳನ್ನು ಸಂಪೂರ್ಣ ನಿಯಂತ್ರಿಸಿಕೊಳ್ಳುತ್ತಾಳೆ. 'ನಿಮ್ಮ ತೀರ್ಮಾನ ಅತ್ಯುತ್ತಮವಾದದ್ದು. ನಿಮ್ಮ ಜಾಗದಲ್ಲಿದ್ದರೆ ನಾನೂ ಸಹ ಅದನ್ನೇ ಮಾಡುತ್ತಿದ್ದೆ. ನಾನು ಸಹ ನಿಮ್ಮೊಂದಿಗೆ ತಪಸ್ಸಿಗೆ ಬರಲು ಸಿದ್ಧ. ರಾಹುಲನನ್ನು ಪೋಷಿಸುವ, ಸದ್ಗುಣವಂತನಾಗಿ ರೂಪಿಸುವ ಹೊಣೆ ನನ್ನ ಮೇಲಿದೆ' ಎಂದು ಕೌಟುಂಬಿಕ ಜವಾಬ್ದಾರಿ ಹೊತ್ತುಕೊಳ್ಳುತ್ತಾಳೆ.

ಹೀಗೆ ಬೀಳ್ಕೊಂಡ ಸಿದ್ಧಾರ್ಥನ ದಾರಿಯಲ್ಲಿ ಎದುರಾದವರು ಹಲವು ಮಂದಿ. ದಾರಿಯಲ್ಲಿ ಭೇಟಿಯಾದ ಮಗಧ ರಾಜ ಬಿಂಬಸಾರನಿಗೆ ತನ್ನ ಸಾಧನೆಯ ನಂತರ ಮಗಧಕ್ಕೆ ಭೇಟಿ ಕೊಡುತ್ತೇನೆ ಎಂಬ ಮಾತು ಕೊಡುತ್ತಾನೆ. ಅವನ ಜೋಪಡಿಯ ಪಕ್ಕದಲ್ಲಿದ್ದ ಐವರು ಸನ್ಯಾಸಿಗಳು ಬುದ್ಧ ಜ್ಞಾನೋದಯ ಪಡೆದ ನಂತರ ಬೋಧನೆಯನ್ನು ಕೇಳಿದ ಮೊದಲಿಗರಾಗಿದ್ದರು. ಮುಂದೆ ತನ್ನ ಶೋಧದ ದಾರಿಯಲ್ಲಿ ಪ್ರಖ್ಯಾತರಾದ ಋಷಿಗಳನ್ನು ಕಾಣುತ್ತಾನೆ. ವೇದ ಶಾಸ್ತ್ರಗಳನ್ನು ಅರಿಯುವ ಪ್ರಯತ್ನ ಮಾಡುತ್ತಾನೆ. ಅದೆಲ್ಲಾ ಕಲಿತ ನಂತರ ಸಾಂಖ್ಯಶಾಸ್ತ್ರವನ್ನೂ ಕಲಿಯುತ್ತಾನೆ. ಉಸಿರಾಟ ನಿಯಂತ್ರಣದ ಮೂಲಕ ಸಾಧಿಸುವ ಧ್ಯಾನಾವಸ್ಥೆ, ಸಮಾಧಿಮಾರ್ಗದಲ್ಲಿ ತರಬೇತಿ ಪಡೆದು ಇನ್ನೇನಾದರೂ ಕಲಿಯುವುದು ಇದೆಯೇ ಎಂದು ಪ್ರಶ್ನಿಸುತ್ತಾನೆ. ಏನೂ ಇಲ್ಲವೆಂದಾಗ ಇದುವರೆಗೂ ಸಾಧಿಸಿದ ಸನ್ಯಾಸತ್ವದ ಪ್ರಯೋಗ, ಪರೀಕ್ಷೆಗಳಿಗೆ ತನ್ನನ್ನು ಒಡ್ಡಿಕೊಳ್ಳುತ್ತಾನೆ. ಸುಮಾರು ಆರು ವರ್ಷಗಳ ಕಾಲ ಸಾಧಿಸಿದ ದೇಹವನ್ನು ನಿಯಂತ್ರಿಸಬಲ್ಲ ಈ ಸಾಧನೆಗಳು ಯಾವುದೇ ಬಗೆಯ ಹೊಸ ಬೆಳಕನ್ನಾಗಲೀ, ಪ್ರಪಂಚದ ಸಂಕಟಗಳಿಗೆ ಯಾವುದೇ ವಿಮೋಚನೆ ಕೊಡುವಲ್ಲಿ ಪ್ರಯೋಜನಕ್ಕೆ ಬಾರದವು ಎಂಬ ತಿಳಿವಳಿಕೆ ಪಡೆಯುತ್ತಾನೆ. ಅನ್ನ, ಪಾನಗಳ ತ್ಯಜಿಸಿದರೆ ಶರೀರ ಬಳಲುತ್ತದೆ. ಅದರಿಂದ ಯಾವ ಹೊಸ ಬೆಳಕು ಮೂಡದು. ಸ್ವಸ್ಥ ಶರೀರದಲ್ಲಿನ ಸ್ವಸ್ಥ ಮನಸ್ಸೇ ಎಲ್ಲ ಸಾಧನೆಗಳ ಮೂಲ ಎಂಬ ಸತ್ಯ ಅರಿಯುತ್ತಾನೆ. ತಾನು ಕುಳಿತಿದ್ದ ಭೋಧಿವೃಕ್ಷಕ್ಕೆ ಸುಜಾತಾ ಅರ್ಪಿಸಿದ್ದ ಪ್ರಸಾದ ಸೇವಿಸುತ್ತಾನೆ. ಅವನ ಸಾಧನೆಯ ದಾರಿ ದೇಹನಿಗ್ರಹದಿಂದ ಮನೋನಿಗ್ರಹದ ಕಡೆ ಹೊರಳುತ್ತದೆ. ಈ ಹಂತದಲ್ಲಿ ತನ್ನಲ್ಲಿ ಉಳಿದಿದ್ದ ಕಾಮನೆಗಳು, ಕೋಪತಾಪಗಳಿಂದ ಬಿಡುಗಡೆ ಪಡೆಯುತ್ತಾನೆ. ಈಗಿನ ಬುದ್ಧಗಯಾದ ಬೋಧಿವೃಕ್ಷದ ಕೆಳಗೆ ಜ್ಞಾನೋದಯ ಪಡೆಯುತ್ತಾನೆ. ಅವನು ಪಡೆದ ಜ್ಞಾನವೆಂದರೆ ಪ್ರಪಂಚದಲ್ಲಿರುವ ನೋವು, ಸಂಕಟಗಳ ಅರಿವು. ಈ ನೋವು ಸಂಕಟಗಳ ನಿವಾರಣಾ ಮಾರ್ಗಗಳು. ಇದೇ ನಾವು ಕೇಳಿರುವ ಬುದ್ಧನ ಜ್ಞಾನೋದಯದ ಸಾಮಾನ್ಯ ವ್ಯಾಖ್ಯಾನ. ಸಂಕಟದ ಅರಿವು ಮತ್ತು ಸಂಕಟದ ನಿವಾರಣೆಯ ಹುಡುಕಾಟ ಎಂಬ ಎರಡೂ ಕ್ರಿಯೆಗಳನ್ನು ಸಮ್ಮಬೋಧಿ ಎಂದು ಕರೆಯಲಾಗುತ್ತದೆ. ಅದುವರೆಗೂ ಕೇವಲ ಮರವಾಗಿದ್ದ ಮರವೊಂದು ಸಿದ್ಧಾರ್ಥ ಬುದ್ಧನಾದ ನಂತರ ತಾನೂ ಸಹ ಬೋಧಿವೃಕ್ಷವೆಂಬ ಹೆಸರಿನ ಹೆಗ್ಗಳಿಕೆಯನ್ನು ಪಡೆಯಿತು.

**■ ಅಮೃತಮತಿ**

## ಮಾತೇ ಮುತ್ತು

- ಕೋಪ ಪ್ರೇಮವನ್ನು ದ್ವೇಷಿಸುತ್ತದೆ. ಪ್ರೇಮವು ಕೋಪವನ್ನು ನಂದಿಸುತ್ತದೆ.
  —ಮಹಾತ್ಮ ಗಾಂಧಿ
- ಪ್ರಜಾಪ್ರಭುತ್ವ ಒಬ್ಬ ರಾಜನಿಲ್ಲದ, ಅವನಿಗಿಂತ ಬಹುಪಾಲು ಕ್ರೂರಿಗಳಾದ ಬಹುಜನರ ಪೀಡನೆಗೆ ಗುರಿಯಾದ ವ್ಯವಸ್ಥೆ.
  —ಮುಸಲೋನಿ
- ಜೀವನದ ಆಚೆ ಇರುವಂತಹ ಆಸೆಯೇ ನಮ್ಮ ಜೀವನದ ಅತ್ಯಗತ್ಯ ಗುರಿ.
  —ಖಲೀಲ್ ಗಿಬ್ರಾನ್
- ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರ್ದ ಲಿಂಗವು ಘಟಸರ್ಪದಂತೆ.
  —ಬಸವಣ್ಣ
- ಇತರರಿಗೆ ಸಂತಸ ನೀಡುವಾಗ ಉಂಟಾಗುವ ಸಂತಸಕ್ಕಿಂತ ಮಿಗಿಲಾದದ್ದು ಬೇರೆ ಇಲ್ಲ.
  —ಮೆಹರ್ ಬಾಬಾ
- ಇತರರನ್ನು ಸಂತೋಷಪಡಿಸಲು ಬದುಕುವವರು, ಬದುಕುವುದಕ್ಕಾಗಿಯೇ ಸಂತೋಷಪಡಬೇಕು.
  —ಜಾನ್ಸನ್